ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಮಾಸಾಶನಗಳನ್ನು ಕೊಡುವುದಕ್ಕೆ ಪಂಂಜೆ ಕನ್ನಡ ಸಂಸ್ಕೃತಿ ಇಲಾಖೆಯವರು ಅರ್ಜಿಗಳನ್ನು ಕರೆಯುತ್ತಾರೆ. ಅರ್ಜಿಗಳನ್ನು ಕರೆಯುತಕ್ಕಂಥ ಸಂದರ್ಭಗಳಲ್ಲಿ ಅವರು ೫೮ ವರ್ಷಕ್ಕಿಂತ ಮೊದಲಿದವರಾಗಿರಬೇಕು. ಅವರ ಆದಾಯ ವರ್ಷಕ್ಕೆ ಳಿ೧೦ ರೂಪಾಯಿಗೂ ಕಡಿಮೆ ಇರುವ ಪಟ್ಟಿಯನ್ನು ಲಗತ್ತಿಸಬೇಕು. ಇವೆಲ್ಲವೂ ಆದ ನಂತರ ಜಿಲ್ಲಾಧಿಕಾರಿಗಳಿಗೆ ಈ ರೀತಿ ಬಂದಿರತಕ್ಕಂಥ ಅರ್ಜಿಗಳನ್ನು ವಿಚಾರಣೆಗಾಗಿ ಕಳುಹಿಸಲಾಗುವುದು. ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಇದರ ಬಗ್ಗೆ ವಿಚಾರ ಮಾಡಿ ಅವರು ನಿಜವಾಗಿ ಕಷ್ಟದ ಸ್ಥಿತಿಯಲ್ಲಿದ್ದಾರೆ ಎಂದು ಕಂಡು ಬಂದರೆ ಆ ಶಿಫಾರಸ್ಸನ್ನು ಸರ್ಕಾರವು ನೇರವಾಗಿ ಮತ್ತು ಅನೇಕ ಸಂದರ್ಭಗಳಲ್ಲಿ ಈ ಅಕಾಡೆಮಿಗಳು ಶಿಫಾರಸ್ಸು ಮಾಡತಕ್ಕಂಥವರ ಸಾದರ್ಶನವನ್ನು ತೆಗೆದುಕೊಂಡು ಕಷ್ಟದ ಸ್ಥಿತಿಯಲ್ಲಿದ್ದಾರೆ ಎಂದು ಕಂಡು ಬಂದರೆ ಅವೆರಡನ್ನೂ ಕ್ರೋಢೀಕರಿಸಿ ಸರ್ಕಾರವು ಮಾಸಾಶನವನ್ನು ಮಂಜೂರು ಮಾಡುತ್ತದೆ.

ಶ್ರೀ ಬಿ. ಎಂ. ಇದಿನಬ್ಬ,—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ೧೯೮೬-೮೭ರಲ್ಲಿ ೫೭ ಜನ ಕಲಾವಿದರಿಗೆ ಮಾಸಾಶನವನ್ನು ಕೊಡಲಾಗಿದೆ ಎಂದು ಹೇಳಿದ್ದಾರೆ. ೧೯೮೭-೮೮ನೇ ಸಾಲಿನಲ್ಲಿ ಮಾಸಾಶನವನ್ನು ಮಂಜೂರು ಮಾಡಿರುವುದಿಲ್ಲ ಎಂದು ಹೇಳಿದ್ದಾರೆ. ಈಗಾಗಲೇ ೧೯೮೭-೮೮ ಆಗಿದೆ. ಇನ್ನಾದರೂ ಅದನ್ನು ಮಂಜೂರು ಮಾಡುತ್ತಾರೋ ಇಲ್ಲವೋ ?

ಶ್ರೀ ಎಂ. ಪಿ. ಪ್ರಕಾಶ್.—ಅಧ್ಯಕ್ಷರೇ, ಮಾಸಾಶನವನ್ನು ಪ್ರತಿವರ್ಷ ಕೊಡತಕ್ಕಂಥದ್ದು ಇದೆ. ೧.೨೯ ಲಕ್ಷ ರೂಪಾಯಿ ಪ್ರತಿವರ್ಷ ಕಲಾವಿದರ ಮಾಸಾಶನಕ್ಕಾಗಿ ಹೋಗುತ್ತಿದೆ. ಈ ವರ್ಷದಲ್ಲಿ ಅಂದರೆ ಕಳೆದ ನವೆಂಬರ್ ಒಂದನೇ ತಾರೀಖು ಈ ಪಟ್ಟಿ ಬಿಡುಗಡೆಯಾಗಬೇಕಾಗಿತ್ತು. ಅದು ಆಗಲಿಲ್ಲ. ಈ ತಿಂಗಳ ಅಂತ್ಯಭಾಗ ಇಲ್ಲವೇ ಜುಲೈ ಮೊದಲನೇ ವಾರದಲ್ಲಿ ಪಟ್ಟಿ ಅಂತ್ಯವಾಗಿ ಹೊರಬೀಳಲಿದೆ, ಮಾಸಾಶನವನ್ನು ಕೊಡುವುದನ್ನು ಕೈಬಿಡುವುದಿಲ್ಲ.

ಕನ್ನಡ ಚಲನ ಚಿತ್ರಗಳಿಗೆ ಸಹಾಯ ಧನ

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಇರುವ ಖಾಯಂ, ಅರೆ ಖಾಯಂ ಮತ್ತು ಸಂಚಾರಿ ಚಿತ್ರಮಂದಿರಗಳೆಷ್ಟು ?

ಆ) ರಾಜ್ಯದಲ್ಲಿ ತಯಾರಾಗುವ ಕನ್ನಡ ಚಿತ್ರಗಳ ಸಂಖ್ಯೆ ಎಷ್ಟು ?

ಇ) ಕಳೆದ ಮೂರು ವರ್ಷಗಳಲ್ಲಿ ಕನ್ನಡ ಚಿತ್ರಗಳಿಂದ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಬಂದ ಆದಾಯವೆಷ್ಟು ?

ಈ) ೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ಕನ್ನಡ ಚಲನಚಿತ್ರಗಳಿಗೆ ನೀಡಲಾದ ಸಹಾಯ ಧನವೆಷ್ಟು ?

ಉ) ಚಲನಚಿತ್ರ ನಿರ್ಮಾಪಕರಿಗೆ ನೀಡಬೇಕಾಗಿರುವ ಸಹಾಯ ಧನವನ್ನು ಏನಾದರೂ ಸರ್ಕಾರ ಬಾಕಿ ಉಳಿಸಿಕೊಂಡಿದೆಯೇ ?

ಊ) ಹಾಗಿದ್ದಲ್ಲಿ, ಈ ಹಣವನ್ನು ಯಾವಾಗ ನೀಡಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬಿ.ಡಿ.ಎ. ಸಚಿವರು).—

ಅ) ಖಾಯಂ ಚಿತ್ರಮಂದಿರಗಳು : ೫೭.

ಅರೆ ಖಾಯಂ ಚಿತ್ರ ಮಂದಿರಗಳು : ೩೩.

ಸಂಚಾರಿ ಚಿತ್ರಮಂದಿರಗಳು : ೭೭

ಆ) ೧೯೬೭-೬೮ರಿಂದ ೧೯೮೭-೮೮ರವರೆಗೆ ೯೩೮ ಕನ್ನಡ ಚಿತ್ರಗಳನ್ನು ತಯಾರಿಸಲಾಗಿದೆ.

ಇ) ೧೯೮೫-೮೬ರಿಂದ ೧೯೮೭-೮೮ರವರೆಗೆ ಕನ್ನಡ ಚಲನಚಿತ್ರಗಳಿಂದ ಮನರಂಜನಾ ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಬಂದ ಆದಾಯ ಈ ಕೆಳಕಂಡಂತಿದೆ :-

ವರ್ಷ	ಮನರಂಜನಾ ತೆರಿಗೆ	ಸರ್ ಛಾರ್ಜ್	ಪ್ರದರ್ಶನ ತೆರಿಗೆ	ಒಟ್ಟು
	(ಕೋಟಿ ರೂ.ಗಳಲ್ಲಿ)			
೧೯೮೫-೮೬	೪.೦೦	೪.೦೦	೧.೩೫	೯.೩೫
೧೯೮೬-೮೭	೪.೨೫	೪.೨೫	೧.೫೦	೧೦.೦೦
೧೯೮೭-೮೮	೪.೯೦	೪.೯೦	೧.೬೫	೧೧.೪೫

ಈ) ೧) ೧೯೮೫-೮೬ — ರೂ. ೩೬.೭೫ ಲಕ್ಷ
೨) ೧೯೮೬-೮೭ — ರೂ. ೨೪.೨೫ ಲಕ್ಷ
೩) ೧೯೮೭-೮೮ — ರೂ. ೨೯.೭೫ ಲಕ್ಷ

ಉ) ಹೌದು.

ಊ) ಆದಷ್ಟು ಬೇಗ ಪಾವತಿ ಮಾಡಲಾಗುವುದು.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ, ಚಲನಚಿತ್ರ ನಿರ್ಮಾಪಕರಿಗೆ ನೀಡ ಬೇಕಾಗಿರುವ ಸಹಾಯ ಧನ ಬಾಕಿ ಇದೆಯೇ ಎಂಬ ಪ್ರಶ್ನೆಗೆ ಮಾನ್ಯ ಸಚಿವರು ಹೌದು ಎಂದು ತಿಳಿಸಿದ್ದಾರೆ. ಎಷ್ಟು ಬಾಕಿ ಉಳಿಸಿಕೊಂಡಿದ್ದಾರೆಂದು ಕೇಳುತ್ತೇನೆ. ಎರಡನೆಯದಾಗಿ ಚಲನಚಿತ್ರ ರಂಗದಲ್ಲಿ ಒಳ್ಳೆಯ ಚಲನಚಿತ್ರಗಳು ಬರುತ್ತಿಲ್ಲ ಎಂದು ಕಂಪ್ಲೈಂಟ್ ಬಂದಿದೆಯೇ? ಮೂರನೆಯದಾಗಿ ತಮ್ಮ ಲೆಕ್ಕದ ಪ್ರಕಾರ ೧೯೮೫-೮೬ರಲ್ಲಿ ೯ ಕೋಟಿ ರೂಪಾಯಿ ನಿಗಿಸಿದ್ದೀರಿ. ೧೯೮೬-೮೭ರಲ್ಲಿ ೯ ಕೋಟಿ ೭೫ ಲಕ್ಷ ರೂಪಾಯಿ ಮಿಗಿಸಿದ್ದೀರಿ. ೧೯೮೭-೮೮ರಲ್ಲಿ ೧೦ ಕೋಟಿ ೫೫ ಲಕ್ಷ ರೂಪಾಯಿ ವಿಂಗಿಸಿದ್ದೀರಿ. ಬಾಕಿ ಪಾವತಿಯನ್ನು ಬೇಗ ಮಾಡಬೇಕು. ಇದು ಬಹಳ ಮುಖ್ಯವಾದ ಎಂಟರ್‌ಟೇನ್‌ಮೆಂಟ್. ತಾವು ಪೂರ್ಣವಾಗಿ ಸುಸಜ್ಜಿತವಾದ ಸ್ಟುಡಿಯೋ ಮಾಡಿ ಚಿತ್ರ ನಿರ್ಮಾಣ ಮಾಡುವುದಕ್ಕೆ ಅನುಕೂಲ ಮಾಡಿಕೊಡಿ. ಡಿಸ್ನೀ ಲ್ಯಾಂಡ್ ಟೈಪ್‌ಗೋಸ್ಕರ ರೇಸ್ ಕೋರ್ಸ್ ಅಕ್ವೈರ್ ಮಾಡಿಕೊಳ್ಳಬೇಕು. ಇಲ್ಲದೇ ಹೋದರೆ ಬೆಂಗಳೂರಿನ ಪ್ಯಾಲೇಸ್ ಅನ್ನು ಸ್ಟುಡಿಯೋ ಮಾಡಿಕೊಂಡು ಎಂಟರ್‌ಟೇನ್ ಮೆಂಟ್‌ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ? ಯಾಕೆಂದರೆ ೩೮ ಕೋಟಿ ರೂಪಾಯಿ ವಿಂಗಿಸಿದ್ದೀರಿ. ಇದನ್ನು ದಯವಿಟ್ಟು ಹೇಳಬೇಕು.

ಶ್ರೀ ಎಂ. ಪಿ. ಪ್ರಕಾಶ್.— ಮಾನ್ಯ ಸದಸ್ಯರು ಯಾವುದೋ ಪ್ರಶ್ನೆಯನ್ನು ಕೇಳಿ ಯಾವುದಕ್ಕೋ ಉಪ ಪ್ರಶ್ನೆ ಹಾಕುತ್ತಾರೆ. ನೇರವಾದ ಪ್ರಶ್ನೆ ಕೇಳಿದರೆ ಉತ್ತರ ಕೊಡುವುದಕ್ಕೆ ಸುಲಭವಾಗುತ್ತದೆ. ಇಲ್ಲಿ ಇರತಕ್ಕದ್ದು ಕೆಲವು ಚಲನಚಿತ್ರ ನಿರ್ಮಾಪಕರಿಗೆ ಕೊಡಬೇಕಾದ ೪೫ ಲಕ್ಷ ರೂಪಾಯಿಗಳ ಅನುದಾನದ ವಿಚಾರ. ಡಿಸ್ನೀ ಲ್ಯಾಂಡ್ ಟೈಪ್‌ಗೋಸ್ಕರ ರೇಸ್‌ಕೋರ್ಸ್ ಅನ್ನು ಅಕ್ವೈರ್ ಮಾಡಿಕೊಂಡು ಸ್ಟುಡಿಯೋ ಸ್ಥಾಪನೆ ಮಾಡಬೇಕೆಂದು ಹೇಳಿದ್ದಾರೆ. ಸ್ಟುಡಿಯೋ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಬೇಕು. ರೇಸ್‌ಕೋರ್ಸ್ ಅನ್ನು ಅಕ್ವೈರ್ ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ. ಆದನ್ನು ಅಕ್ವೈರ್ ಮಾಡಿಕೊಳ್ಳಬೇಕಾದ ಅವಶ್ಯಕತೆ ಈ ಕೆಲಸಕ್ಕೆ ಇಲ್ಲ. ಅದನ್ನು ಬೇರೆ ಉದ್ದೇಶಕ್ಕಾಗಿ ಅಂದರೆ ಮಕ್ಕಳ ಉದ್ಯಾನವನವನ್ನಾಗಿ ಪರಿವರ್ತಿಸಲು ಯೋಜನೆ ಇದೆ. ಉಪ ಪ್ರಶ್ನೆ ಕೇಳುವಾಗ ಬೇರೆಯಾದ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ನೇರವಾದ ಪ್ರಶ್ನೆಯನ್ನು ಕೇಳಬೇಕು.

ಶ್ರೀ ಆರ್. ವೆಂಕಟರಾಮಯ್ಯ.— ಚಲನಚಿತ್ರ ರಂಗದಲ್ಲಿ ಒಳ್ಳೆಯ ಚಲನಚಿತ್ರಗಳು ಬರುತ್ತಿಲ್ಲ ಎಂಬ ಕಂಪ್ಲೇಂಟ್ ಬಂದಿದೆಯೇ ಎಂದು ಕೇಳಿದ್ದೆ. ಈ ನಡುವೆ ೩-೪ ವರ್ಷಗಳಿಂದ ಹೆಚ್ಚು ಸಹಾಯ ಧನ ಕೊಡುತ್ತಿದ್ದೀರಿ. ಉತ್ತಮ ಗುಣ ಮಟ್ಟದ ಚಿತ್ರಗಳು ಹೆಚ್ಚು ಬರುವುದಕ್ಕೆ ಕ್ರಮಬದ್ಧ ಮಾಡುವಂತಹ ಪ್ರೋಗ್ರಾಮ್ ಏನಾದರೂ ಇದೆಯೇ ?

ಶ್ರೀ ಎಂ. ಪಿ. ಪ್ರಕಾಶ್.— ಸುಮಾರು ೧೦ ವರ್ಷದಿಂದ ಸಹಾಯ ಧನವನ್ನು ಕೊಡುತ್ತಿದ್ದೇವೆ. ಕೆಲವು ಕನ್ನಡ ಚಲನಚಿತ್ರಗಳು ರಾಷ್ಟ್ರ ಮಟ್ಟದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದಿವೆ. ಕನ್ನಡ ಚಲನ ಚಿತ್ರಕ್ಕೆ ಪ್ರೋತ್ಸಾಹ ಕೊಡಬೇಕೆಂಬ ಕಾರಣಕ್ಕಾಗಿ ಎಷ್ಟೂವರೆ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. ಮತ್ತ ಕಲಾತ್ಮಕ ಚಲನಚಿತ್ರಗಳಿಗೆ ೩ ಲಕ್ಷ ರೂಪಾಯಿ ಸಹಾಯ ಧನ ಕೊಡುತ್ತೇವೆ. ಚಲನಚಿತ್ರಗಳಿಗೆ ಹೆಚ್ಚು ಸಹಾಯ ಧನ ಕೊಡುತ್ತೇವೆಂದು ಘೋಷಣೆ ಮಾಡಿದ ತಕ್ಷಣ ಒಳ್ಳೆಯ ಚಲನಚಿತ್ರಗಳು ಬರುತ್ತಾ ಇಲ್ಲ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಸಹಾಯ ಧನ ಕೊಟ್ಟ ಮಾತ್ರಕ್ಕೆ ಗುಣಮಟ್ಟ ಹೆಚ್ಚಬೇಕು ಎಂದು ಅಲ್ಲ. ಸಮಾಜದಲ್ಲಿ ಜನರ ಅಭಿರುಚಿಗೆ ತಕ್ಕಂಥ ಚಲನಚಿತ್ರಗಳು ಬರುತ್ತಿವೆ. ಎಲ್ಲವೂ ಕೆಟ್ಟ ಚಿತ್ರಗಳು, ಒಳ್ಳೆಯ ಚಲನ ಚಿತ್ರಗಳು ಬರುತ್ತಲೇ ಇಲ್ಲ ಎನ್ನುವುದು ಸರಿಯಲ್ಲ. 'ಕಾಡಿನ ಬೆಂಕಿ'ಗೆ ಈ ವರ್ಷ ಅತ್ಯುತ್ತಮ ಪ್ರಶಸ್ತಿ ಸಿಕ್ಕಿದೆ. 'ತಬರನ ಕಥೆ' ಚಿತ್ರಕ್ಕೆ 'ಕಮಲ ಪ್ರಶಸ್ತಿ' ಸಿಕ್ಕಿದೆ. ನಮ್ಮ ಗಿರೀಶ್ ಕಾಸರವಳ್ಳಿ ಸತ್ಯಜಿತ್‌ರಾಯ್ ನಂತರ ಹಿನೇ ಬಾರಿಗೆ ಅತ್ಯುತ್ತಮ ರಾಷ್ಟ್ರ ಪ್ರಶಸ್ತಿ ಪಡೆದ ಕನ್ನಡಿಗರು. ಸಾರಾಸಗಟಾಗಿ ಎಲ್ಲ ಕನ್ನಡ ಚಲನಚಿತ್ರಗಳು ಕಳಪೆ ಎಂದು ಹೇಳುವುದು ಸರಿಯಲ್ಲ, ಒಳ್ಳೆಯ ಕನ್ನಡ ಚಲನಚಿತ್ರಗಳೂ ಬರುತ್ತಿವೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಸುಸಜ್ಜಿತವಾದಂಥ ಸ್ಟುಡಿಯೋ ಒಂದನ್ನು ಸ್ಥಾಪನೆ ಮಾಡುತ್ತೀರಾ ಎಂದು ಕೇಳಿದ್ದೆ. ಅದಕ್ಕೆ ತಾವು ಉತ್ತರ ಕೊಡಲಿಲ್ಲ ?

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಸದಸ್ಯರು ಸ್ಟುಡಿಯೋ ಬಗ್ಗೆ ನೇರವಾಗಿ ಪ್ರಶ್ನೆ ಕೇಳಿಲ್ಲ. ಆದರೂ ಇವರ ಬಗ್ಗೆ ಉತ್ತರ ಕೊಡಬೇಕೆಂದರೆ, ಈಗ ನಮ್ಮಲ್ಲಿ ಕಂಠೀರವ ಸ್ಟುಡಿಯೋ ಇದೆ. ಅದು ಎಲ್ಲ ರೀತಿಯಿಂದ ಸುಸಜ್ಜಿತವಾದಂಥ ಸ್ಟುಡಿಯೋ ಆಗಿದೆ. ಆದ್ದರಿಂದ ಅಲ್ಲಿ ಯಾರುಬೇಕಾದರೂ ತಮಗೆ ಬೇಕಾದಂಥ ಉಪಕರಣಗಳನ್ನು ಪಡೆಯಬಹುದು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರಿಗೆ ಸಿನಿಮಾ ಟಾಕೀಸ್ ಮತ್ತು ಸಿನಿಮಾ ಟೆಂಟ್‌ಗಳು ಇವೆ. ಆದ್ದರಿಂದ ಅವರಿಗೆ ಉಪಪ್ರಶ್ನೆ ಕೇಳಲು ಅವಕಾಶ ಮಾಡಿಕೊಡಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮಂತ್ರಿಗಳು ನನ್ನ ಆಸ್ತಿಯ ಬಗ್ಗೆ ಹೇಳುತ್ತಿದ್ದಾರೆ. ಆದರೆ ಅವರ ಆಸ್ತಿ ಎಷ್ಟಿದೆ ಎಂಬುದು ನನಗೆ ಗೊತ್ತಿದೆ. ಅವರ ಆಸ್ತಿಯಲ್ಲಿ ಐವತ್ತನೇ ಒಂದು ಭಾಗದಷ್ಟು ಸಹ ನನಗೆ ಇಲ್ಲ.

ಪಕ್ಕೆ ಸಂಸ್ಥೆಗಳ ದುರಸ್ತಿ ಮತ್ತು ನಿರ್ವಹಣೆ

೨೫೮. ಶ್ರೀ ಟಿ. ಎಸ್. ಪಣಿ (ಕೆ ಜಿ.ಎಫ್.),—ಮಾನ್ಯ ಗ್ರಾಮಾಣ ಅಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಕೆ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪಕ್ಕೆ ಮಂಡಳಿಯಿಂದ ರಾಜ್ಯದ ವಿಭಿನ್ನ ನಗರಗಳಲ್ಲಿರುವ ಮಸೀದಿಗಳ ದುರಸ್ತಿ ಮತ್ತು ನಿರ್ವಹಣೆಗಾಗಿ ಕೊಡಲಾಗಿರುವ ಹಣವೆಷ್ಟು (ನಗರವಾರು ವಿವರಗಳನ್ನು ನೀಡುವುದು) :

ಆ) ಕೆ ಜಿ ಎಫ್. ನಗರಕ್ಕೆ ಇಂತಹ ಯಾವುದೇ ನೆರವು ಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಇ) ಕೆ. ಜಿ. ಎಫ್. ನಗರದಲ್ಲಿರುವ ಮಸೀದಿಗಳಿಗೆ ಹಣ ಸಹಾಯ ನೀಡುತ್ತಿದೆಯೇ; ಹಾಗಿದ್ದಲ್ಲಿ ಯಾವಾಗ ?